


ಅಪೂರ್ವನಿಗೆ ಅಪಾಯಕಾರಿಯೇ ಆಗಿ ಬಿಟ್ಟಿತು. ಬಹಳ ಹೊತ್ತು ಕಾದು ಕುಳಿತರೂ ಮೋಡ ಚದುರಲಿಲ್ಲ; ಚಂದ್ರ ಕಾಣಲಿಲ್ಲ.

★★★

ಆದಿನ ಡೈರಿಯ ಇದಿರು ಕೆಲವರು ಯಾರಿಗೋ ಕಾಯುತ್ತಿದ್ದಂತೆ ಕಾಣಿಸಿತು. ಅಪೂರ್ವ ಹತ್ತಿರವಾಗುತ್ತಿದ್ದಂತೆ ಅವರೆಲ್ಲ ಇವನನ್ನೇ ಸುತ್ತುವರಿದು ನಿಂತರು. ಡೈರಿಯ ಗುಮಾಸ್ತ, “ನಿನ್ನೆ ನನ್ನ ಟೇಬಲ್ಲಿನ ಮೇಲಿದ್ದ ಒಂದು ಲಕ್ಷ ರೂಪಾಯಿ ಎಲ್ಲಿ?” ಎಂದು ಕಣ್ಣು ಕೆಂಪಗೆ ಮಾಡಿಕೊಂಡು ಗದರಿದ.

ಅಪೂರ್ವನಿಗೆ ಎದೆಬಡಿತ ಹೆಚ್ಚಿತು.

“ನನಗೆ ಗೊತ್ತಿಲ್ಲ... ನನ್ನನ್ನೇಕೆ ಕೇಳುತ್ತಿದ್ದೀರಿ?” ಎನ್ನುವಾಗ ಸ್ವರ ನಡುಗುತ್ತಿತ್ತು.